



# ಡಾಲ್-ಇ2! ಮಾತೆಲ್ಲ ಕೃತಿ!

■ ಗುರುರಾಜ ಶಾಸ್ತ್ರಿ

ನಾನೊಂದು ಕಾದಂಬರಿ ಬರೆದಿದ್ದೇನೆ. ಅದಕ್ಕೊಂದು ಮುಖಪುಟ ಬೇಕು. ಮುಖಪುಟದಲ್ಲಿ ಸೂರ್ಯ, ಹಾರುವ ವಿಮಾನ ಹಾಗೂ ಭೂಮಿಯಲ್ಲಿ ಕುದುರೆಯ ಮೇಲೆ ಬೇಟೆಗೆ ಹೊರಟಿರುವ ರಾಜಕುಮಾರ, ದೂರದಲ್ಲಿ ಹಸುರು ಕಾಡು, ರಾಜಕುಮಾರನನ್ನು ನೋಡಿ ಹೆದರಿಕೊಂಡಿರುವ ಹುಲಿ ಹಾಗೂ ಒಂದೆರಡು ಜಿಂಕೆಗಳು...

ಮೇಲಿನ ವಿವರಗಳನ್ನು ಮುಖಪುಟ ಚಿತ್ರಕಾರನಿಗೆ ಹೇಳುತ್ತಿಲ್ಲ; ಕಂಪ್ಯೂಟರ್‌ಗೆ ಹೇಳುತ್ತಿದ್ದೇನೆ. ನನ್ನ ಮಾತುಗಳಿಗೆ ತಕ್ಕಂತೆ ಕಂಪ್ಯೂಟರ್ ಕೊಟ್ಟ ಚಿತ್ರ ಇಲ್ಲಿದೆ ನೋಡಿ. ಇದೆಲ್ಲವೂ 'ಡಾಲ್—ಇ2' ಜಾದೂ.

'ಡಾಲ್—ಇ2' ಒಂದು ವಿಶಿಷ್ಟ ತಂತ್ರಾಂಶ; ನಾವು ನೀಡುವ ವಿವರಗಳನ್ನು ಚಿತ್ರರೂಪದಲ್ಲಿ ರೂಪಿಸಿಕೊಡುವ ಸಾಫ್ಟ್‌ವೇರ್. 'ಕೃತಕ ಬುದ್ಧಿಮತ್ತೆ' ಅಂದರೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಬಳಸಿ ಅಭಿವೃದ್ಧಿಪಡಿಸಿರುವ ಇದು ಉಚಿತವಾಗಿ ಸಿಗುವ ಮುಕ್ತ ತಂತ್ರಾಂಶ (ಓಪನ್ ಸೋರ್ಸ್). ಹಾಗೆಂದು ಈ ತಂತ್ರಾಂಶವನ್ನು ಬಯಸಿದ ತಕ್ಷಣ ಡೌನ್‌ಲೋಡ್ ಮಾಡಿಕೊಂಡು ಬಳಸುವುದು ಸಾಧ್ಯವಿಲ್ಲ. ತಂತ್ರಾಂಶ ಡೌನ್‌ಲೋಡ್ ಮಾಡಿಕೊಳ್ಳಲಿಕ್ಕಾಗಿ ಮೊದಲು ರಿಜಿಸ್ಟರ್ ಮಾಡಿಸಿಕೊಳ್ಳಬೇಕು. ಸರದಿ ಬರಲು ತಿಂಗಳುಗಟ್ಟಲೆ ಕಾಯಬೇಕು. ನನ್ನ ಅಣ್ಣ ನೋಂದಣಿ ಮಾಡಿಕೊಂಡ ಆರು ತಿಂಗಳ ನಂತರ ಸಾಫ್ಟ್‌ವೇರ್ ಕಂಪನಿಯ ಕಡೆಯಿಂದ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ತಲುಪಿತು. ಬಳಕೆದಾರರ ಒತ್ತಡದಿಂದಾಗಿ ಉಂಟಾಗುವ ನೆಟ್‌ವರ್ಕ್ ದಟ್ಟಣೆಯನ್ನು ನಿಭಾಯಿಸಲು ಕಂಪನಿ ಈ ವಿಳಂಬಗತಿ ಅನುಸರಿಸುತ್ತದೆಯಂತೆ.



ತಂತ್ರಾಂಶದ ಬಳಕೆಗೆ ಸಂಬಂಧಿಸಿದಂತೆ ಬಳಕೆದಾರರಿಗೆ ಚೌಕಟ್ಟು ಗೊತ್ತುಪಡಿಸಲಾಗಿದೆ. ಒಬ್ಬ ವ್ಯಕ್ತಿ ದಿನವೊಂದಕ್ಕೆ ಐವತ್ತಕ್ಕಿಂತ ಹೆಚ್ಚು ಚಿತ್ರ ರೂಪಿಸುವುದು ಸಾಧ್ಯವಿಲ್ಲ. ರಿಜಿಸ್ಟರ್ ಮಾಡಿರುವ ಎಲ್ಲರಿಗೂ ಈ ತಂತ್ರಾಂಶದ ಸೇವೆ ಸುಲಭವಾಗಿ ಸಿಗಲಿ ಎಂಬ ಉದ್ದೇಶದಿಂದ ಈ ಮಿತಿ.

ನೀಲಿ ಬಣ್ಣದ ಸೇಬು, ಕುದುರೆಯ ಮೇಲೆ ಜಿಂಕೆ, ಮಂಗಳಗ್ರಹದಲ್ಲಿ ಒಂದು ಕುದುರೆ, ಕಂಪ್ಯೂಟರ್‌ನಿಂದ ಈಚೆ ಬರುತ್ತಿರುವ ಮನುಷ್ಯ – ಹೀಗೆ ನಮಗೆ ಹೊಳೆದ ಅನೇಕ ಕಲ್ಪನೆಗಳನ್ನು ಕಂಪ್ಯೂಟರ್‌ಗೆ ನೀಡಿ ನಾನು ಮತ್ತು ನನ್ನ ಅಣ್ಣನ ಮಗ ಈ ತಂತ್ರಾಂಶ ಪರೀಕ್ಷಿಸಿದೆವು. ತಂತ್ರಾಂಶ ನೀಡಿದ ಕೆಲವು ಚಿತ್ರಗಳನ್ನು ಈ ಬರಹದೊಂದಿಗೆ ಗಮನಿಸಬಹುದು.

ತಂತ್ರಾಂಶದ ವೀಡಿಯೋ ಲಿಂಕ್: bit.ly/3ToFNnx ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ತಂತ್ರಾಂಶ ಇನ್ನು ಅಂಬೆಗಾಲಿಡುತ್ತಿದೆ. ಹಾಗಾಗಿ ಚಿತ್ರಗಳನ್ನು ತುಂಬಾ ಅದ್ಭುತವೆನ್ನುವಂತಿಲ್ಲ. ಯಾವುದೇ ಕಾಪಿರೈಟ್ಸ್ ಇಲ್ಲದೆ, ನಮಗೆ ಬೇಕಾದಂತೆ ಬಳಸಿಕೊಳ್ಳಬಹುದು ಎಂಬುದು ಸಕಾರಾತ್ಮಕ ಸಂಗತಿ. ಏನೇ ಇರಲಿ, ನಾವು ದಿನನಿತ್ಯ ಬರೆದು ಸಾಮಾಜಿಕ ಮಾಧ್ಯಮಗಳಿಗೆ ಕಲಾಕೃತಿಗಳನ್ನು ರಚಿಸಿಕೊಳ್ಳಲು ಈ ತಂತ್ರಾಂಶ ಸಹಕಾರಿ.

ನೋಂದಣಿಗೆ: openai.com/dalle2/



ಪ್ರತಿಕ್ರಿಯಿಸಿ: feedback@sudha.co.in